

ಎಳೆಗಾಳಿಗೆ ಬಳುಕುತ್ತ ತೊನೆದಾಡುವಂತೆ; ಅವರು ಬಾಯಲ್ಲಿದ್ದ ತುತ್ತನ್ನು ತುಟಿಬಿಗಿದುಕೊಂಡೇ ಜಮಡುತ್ತ, ಮೆಲ್ಲಗೆ ಹೌದೋ ಅಲ್ಲವೋ ಎಂಬಂತೆ ತಲೆಯಾಡಿಸಿದರು. ನಾನು ಅರೆಪೆಟ್ಟಾದ ಹಾವು ಉಸಿರು ತಿರುಗಿಸಿಕೊಳ್ಳುವಂತೆ ಸಣ್ಣಗೆ ನಿಟ್ಟುಸಿರುಬಿಟ್ಟೆ. 'ಊಟ ಸಾವಕಾಶ ಆಗ್ಲಿ. ಆಮ್ಯಾಲೆ ನೋಡೂಣಂತ' ಅಂದರು. ಅಷ್ಟಕ್ಕೇ ಅರ್ಧ ಯುದ್ಧ ಗೆದ್ದವನಂತೆ ನಾನು ಉನ್ಮತ್ತನಾದೆ.

ಊಟದ ನಂತರ ಎದುರಿಗೆ ಕೂತು, ಒಂದು ಗಜಲ್ ಓದಿದೆ. ಏನನ್ನಿಸಿತೋ 'ತರ್ರಿಲ್ಲೆ' ಅಂದು ಹಸ್ತಪ್ರತಿ ತೆಗೆದುಕೊಂಡವರು ಛಂದಸ್ಸು ಪರಿಶೀಲಿಸುವವರಂತೆ ಮೇಲಿಂದ ಕೆಳಗೆ ಕಣ್ಣಾಡಿಸುತ್ತಾ, ಒಂದೆರಡನ್ನು ನಿಧಾನಕ್ಕೆ ಒಳಗಿಳಿಸಿಕೊಳ್ಳುವವರಂತೆ ಕಣ್ಮುಚ್ಚಿ ಅನುಭವಿಸುತ್ತಾ ಪುಟ ತಿರುಗಿಸತೊಡಗಿದರು. ನಮಗೆ ಊಟ ಬಡಿಸಿದ ಮನೆಗೆಲಸದ ಲಕ್ಷ್ಮಿ ಒಳಗೆ ಪಾತ್ರೆ ಬೆಳಗುತ್ತಿದ್ದುದು ಇದೆಲ್ಲಕ್ಕೆ ಹಿನ್ನೆಲೆ ಸಂಗೀತವನ್ನು ಒದಗಿಸಿದಂತಿತ್ತು.

ಫಲಿತಾಂಶಕ್ಕಾಗಿ ಕಾತರನಾದ ಹುಡುಗನಂತೆ, ನಾನು ಆಲ್‌ಮೋಸ್ಟ್ ಕೈಮುಗಿದುಕೊಂಡ ಭಂಗಿಯಲ್ಲೇ ವಿನೀತನಾಗಿ ಕುಳಿತಿದ್ದೆ. ಸಡನ್ನಾಗಿ ಅವರು 'ಲಕ್ಷ್ಮೀ...' ಅಂತ ಗಡುಸಾಗಿ ಕೂಗು ಹಾಕಿದರು. 'ಅಪ್ಪಾಜಿ?' ಅನ್ನುತ್ತ ಬಂದ ಆಕೆಗೆ 'ದೇವರ ವರವಾದ ಸ್ನೇಹವೂ ಕಲಬೆರಕೆಯಾಗಿದೆಯೆಂದು ನೀನು ಬಲ್ಲೆಯೇನು?' ಅಂತ ಬರದಾರ ಇವ್ರು. ವಾಹ್... ಕ್ಯಾ ಬಾತ್ ಹೈ ಅಂದರು. ಮತ್ತೆ ವಾಪಸು ಮೊದಲಿನ ಪುಟಗಳಿಗೆ ಬಂದು ಅಲ್ಲಿ ಒಂದೆಡೆ ನಿಂತು 'ನರರ ಪ್ರೇಮದಲಿ ಈಗೀಗ ಎಲ್ಲಿ ನೋಡಿದರಲ್ಲಿ ಬರೀ ಕಾಮದ ವಾಸನೆ/ ಶುದ್ಧಾಂಗ ಪ್ರೇಮವನು ಅರಸಿಕರಲಿ ಹುಡುಕಿಹೊರಟಿದ್ದು ನಿಮ್ಮದೇ ತಪ್ಪು' ಎಂಬ ಶೇರನ್ನು ಓದಿ, 'ಬಹುತ್ ಖೂಬ್' ಎಂದರು. ನನ್ನ ಫಲಿತಾಂಶ ಬಂದಾಗಿತ್ತು, ನಾನು ಆಕಾಶದಲ್ಲಿ ಹಾರಾಡುತ್ತಿದ್ದೆ.

ಹಸ್ತಪ್ರತಿಯನ್ನು ಟೇಬಲ್ ಮೇಲೆಸೆದವರೇ 'ಬರಕೊಳ್ರಿ' ಅಂದರು. ಬೆನ್ನುಡಿಯನ್ನು ಡಿಕ್ಟೇಟ್ ಮಾಡಿಯೇಬಿಟ್ಟರು. ಬರೆದುಕೊಂಡಾದ ಮೇಲೆ ಅದು ಅವರವೇ ಮಾತುಗಳು ಎಂಬುದಕ್ಕೆ ಸಾಕ್ಷಿಯೇನೂ ಇಲ್ಲವಲ್ಲ ಎಂಬ ಪತ್ರಕರ್ತ ಬುದ್ಧಿ ಜಾಗೃತವಾಗಿ, ಕೆಳಗೆ ನಿಮ್ಮದೊಂದು ಹಸ್ತಾಕ್ಷರ ಹಾಕಿ ಸರ್ ಎಂದು ಕೇಳಿಕೊಂಡೆ. ದೊಡ್ಡ ಸೈಜಿನ ಅಕ್ಷರಗಳಲ್ಲಿ